**4ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್ ಸಿ, ಮಂಗಳೂರು, ದ.ಕ,**

ದಿಃ 17.02.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.

**ಪಾಟೀ ಸವಾಲು ವಾದಿ ಪರ ಶ್ರೀ.ಎಂ.ವಿ.ಎಸ್.ಬಿ. ವಕೀಲರಿಂದಃ-**

1. ಪಯಾಸ್ ಕಂಪೌಂಡು ಮೊದಲಿಗೆ ಇ.ಎ. ಪಯಾಸ್ ರವರ ಆಸ್ತಿಯಾಗಿತ್ತು ಎಂದರೆ ಸರಿ. ಅವರು ಮರಣ ಹೊಂದಿಂದ ನಂತರ ವಾದಿ ಈಗ ಅವರ ಕುಟುಂಬದ ಹಿರಿಯರು ಇರುತ್ತಾರೆ ಎಂದರೆ ಸರಿ. 2022-23 ರ ವರೆಗೆ ಪಯಾಸ್ ಕಂಪೌಂಡ್ ಆರ್.ಟಿ.ಸಿ. ಇ.ಎ.ಪಯಾಸ್ ರವರ ಹೆಸರಿಗೆ ಇರುತ್ತದೆ ಎಂದರೆ ಸರಿ. ಸಾಕ್ಷಿಗೆ ಸದರಿ ಆರ್.ಟಿ.ಸಿಯನ್ನು ತೋರಿಸಲಾಗಿ ಅದನ್ನು ಗುರುತಿಸಿದ್ದರಿಂದ ಸದರಿ ದಾಖಲೆಯನ್ನು **ನಿಪಿ.10 ಎಂದು ಗುರುತಿಸಲಾಯಿತು.** ದಾವಾ ಮನೆ ಪಯಾಸ್ ಕಂಪೌಂಡಿನ ಒಂದು ಬದಿಯಲ್ಲಿ ಇರುತ್ತದೆ ಎಂದರೆ ಸರಿ. ಇ.ಎ. ಪಯಾಸ್ ರವರು ಕೊರೋನೇಶನ್ ಟೈಲ್ ವರ್ಕ್ಸ್ ಎಂಬ ಹಂಚಿನ ಕಾರ್ಖಾನೆಯನ್ನು ನಡೆಸುತ್ತಿದ್ದರು ಎಂದರೆ ಸರಿ. ಸದರಿ ಕಾರ್ಖಾನೆಯಲ್ಲಿ ನನ್ನ ತಂದೆ ರಾಮಗಟ್ಟಿ ಆಗಿದ್ದರು ಎಂದರೆ ಸರಿ.

2. ಪಯಾಸ್ ಕಂಪೌಡು ಉಳ್ಳಾಲ ರೈಲು ನಿಲ್ದಾಣದ ಸಮೀಪದಲ್ಲಿ ಇರುತ್ತದೆ ಎಂದರೆ ಸರಿ. ಹಿತ್ತಿಲನ್ನು ಕಾಪಾಡುವ ಉದ್ದೇಶದಕ್ಕಾಗಿ ತನ್ನ ನೌಕರರನ್ನು ಮನೆಯಲ್ಲಿ ಮನೆಯಲ್ಲಿ ವಾಸಿಸಲು ಬಿಟ್ಟಿರುತ್ತಾರೆ ಎಂದರೆ ಸರಿ. ನನ್ನ ತಂದೆ ತೀರಿಹೋದ ನಂತರ ನಾನು ಸದರಿ ಮನೆಯಲ್ಲಿ ವಾಸವನ್ನು ಮುಂದುವರೆಸಿಕೊಂಡು ಬಂದಿರುತ್ತೇನೆ ಎಂದರೆ ಸರಿ.

3. 2022 ರಲ್ಲಿ ವಾದಿಯು ನನ್ನ ವಿರುದ್ಧ ಪೊಲೀಸ್ ಠಾಣೆಯಲ್ಲಿ ದೂರನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ಆಗ 1 ತಿಂಗಳಿನಲ್ಲಿ ಮನೆಯನ್ನು ಬಿಟ್ಟುಕೊಡುತ್ತೇನೆ ಎಂದು ಪೋಲೀಸ್ ಠಾಣೆಯಲ್ಲಿ ಮುಚ್ಚಳಿಕೆ ಬರೆದುಕೊಟ್ಟಿರುತ್ತೆನೆ ಎಂದರೆ ಸರಿಯಲ್ಲ. ಈ ಬಗ್ಗೆ ವಾದಿಯು ದಾಖಲೆಯನ್ನು ಹಾಜರುಮಾಡಿದ ಬಗ್ಗೆ ನನ್ನ ಗಮನಕ್ಕೆ ಬಂದಿರುವುದಿಲ್ಲ. ದಾವಾ ಆಸ್ತಿ ಕಟ್ಟಡದ ಮುನ್ಸಿಪಲ್ ತೆರಿಗೆ ವಾದಿಯ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. ದಾವಾ ಆಸ್ತಿಯ ತೆರಿಗೆ ಪಾವತಿ ರಶೀದಿಗಳನ್ನು ನ್ಯಾಯಾಲಯಕ್ಕೆ ವಾದಿಯು ಹಾಜರುಮಾಡಿದ ಬಗ್ಗೆ ನನ್ನ ಗಮನಕ್ಕೆ ಬಂದಿರುವುದಿಲ್ಲ.

4. ಮೊದಲಿಗೆ ವಾದಿಯು ವಾಸವಿದ್ದ ಬಂಗಲೆಯಿಂದ ನಾವು ವಾಸವಿರುವ ಮನೆಗೆ ವಿದ್ಯುತ್ ಸಂಪರ್ಕವನ್ನು ನೀಡಲಾಗಿದೆ ಎಂದರೆ ಸರಿಯಲ್ಲ. ನಾವು 2003 ರಲ್ಲಿ ದಾವಾ ಆಸ್ತಿ ಮನೆಗೆ ವಿದ್ಯುತ್ ಸಂಪರ್ಕ ಪಡೆದಿರುತ್ತೇವೆ ಎಂದರೆ ಸರಿ. ಸದರಿ ವಿದ್ಯುತ್ ಸಂಪರ್ಕವನ್ನು ಪಡೆಯಲು ನಾವು ಸಲ್ಲಿಸಿದ ಅರ್ಜಿ, ಕರಾರು, ತೆರಿಗೆ ರಶೀದಿಗಳು, ಮಂಜೂರಾತಿ ಪತ್ರ, Indemnity Bond ಎಂದರೆ ನಿಪಿ.5, ನಿಪಿ.5(ಎ) ಮತ್ತು ನಿಪಿ.5(ಬಿ) ದಾಖಲೆಗಳನ್ನು ಸಾಕ್ಷಿಗೆ ತೋರಿಸಲಾಗಿ ಅದನ್ನು ಒಪ್ಪಿರುತ್ತಾರೆ. ಸದರಿ ವಿದ್ಯುತ್ ಸಂಪರ್ಕ ಪಡೆಯುವಾಗ ಅದಕ್ಕೆ ಆಕ್ಷೇಪ ಮಾಡಬಾರದು ಮತ್ತು ನೀವು ಹೇಳಿದಾಗ ವಿದ್ಯುತ್ ಸಂಪರ್ಕವನ್ನು ತೆಗೆಯುತ್ತೇನೆ ಎಂದು ವಾದಿಯ ಬಳಿ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಎಲೆಕ್ಟ್ರಿಕಲ್ ಕಂಟ್ರಾಕ್ಟರ್ ಗೋಪಾಲ್ ರವರ ಮೂಲಕ ನಾನು ನಿಪಿ.5 ಅರ್ಜಿ ಮತ್ತು ಅದರ ಲಗತ್ತಾದ ದಾಖಲೆಗಳನ್ನು ಸಲ್ಲಿಸಿರುತ್ತೇನೆ. ನಿಪಿ.5(ಎ) Indemnity Bond ನಲ್ಲಿ ನನ್ನ ಧಣಿ ಹೇಳಿದಾಗ ವಿದ್ಯುತ್ ಸಂಪರ್ಕವನ್ನು ತೆಗೆಯುತ್ತೇನೆ ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ.

5. ನಾನು ಯಾವ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿರುತ್ತೇನೆ ಎಂದು ತೋರಿಸಲು ದಾಖಲೆ ಇರುತ್ತದೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದು. ನಿಡಿ.8 ಮತ್ತು ನಿಡಿ.9 ತೆರಿಗೆ ಪಾವತಿ ರಶೀದಿ ದಾಖಲೆಗಳನ್ನು ರೇಶನ್ ಕಾರ್ಡ್ ಮಾಡಿಸುವಾಗ ಪಂಚಾಯ್ತಿಯವರು ನನಗೆ ಕೊಟ್ಟಿರುತ್ತಾರೆ. ದಾವಾ ಆಸ್ತಿಯ ಆರ್.ಟಿ.ಸಿ.ಯಲ್ಲಿ ನನ್ನ ಹೆಸರನ್ನು ಬರೆಸಬೇಕು ಎಂದು ಯಾವತ್ತಿಗೂ ಅರ್ಜಿಯನ್ನು ಕೊಟ್ಟಿರುವುದಿಲ್ಲ. ದಾವಾ ಆಸ್ತಿಯ ತೆರಿಗೆ ದಾಖಲೆಯನ್ನು ನನ್ನ ಹೆಸರಿಗೆ ದಾಖಲಿಸಬೇಕು ಎಂದು ನಾನು ಯಾವತ್ತಿಗೂ ಅರ್ಜಿಯನ್ನು ಕೊಟ್ಟಿರುವುದಿಲ್ಲ.

6. ವಾದ ಪತ್ರದ ಕಾಸ್ಟ್ ಟೈಟಲ್ ನಲ್ಲಿ ಪ್ರತಿವಾದಿಯ ವಿಳಾಸ ಎಂದರೆ ನನ್ನ ವಿಳಾಸ ಸರಿಯಾಗಿರುತ್ತದೆ. ಸದರಿ ವಿಳಾಸಕ್ಕೆ ಈ ದಾವೆ ದಾಖಲಿಸುವ ಪೂರ್ವದಲ್ಲಿ ನೋಟೀಸು ಬಂದಿರುತ್ತದೆ ಎಂದರೆ ಸರಿ. ಈ ದಾವೆಯ ಪ್ರತಿವಾದ ಪತ್ರದಲ್ಲಿ ನಾನು ಏನು ಸಾಧನೆ ಮಾಡುತ್ತೇನೆ ಎಂದು ನನಗೆ ಗೊತ್ತಿಲ್ಲ. ನನಗೆ ಕನ್ನಡದಲ್ಲಿ ಮಾತನಾಡಲು ಬರುತ್ತದೆ, ಯಾವುದೇ ತೊಂದರೆ ಇರುವುದಿಲ್ಲ. ನಾನು ನನ್ನ ಸ್ವಂತ ರಿಕ್ಷಾದ ಚಾಲಕನಾಗಿರುತ್ತೇನೆ. ಸುಳ್ಳು ಸಾಧನೆ ಮಾಡಿ ದಾವಾ ಮನೆಯನ್ನು ಬಿಟ್ಟುಕೊಡದೇ ವಾದಿಗೆ ತೊಂದರೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ:-**

ನನ್ನ ಹೇಳಿಕೆ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

4ನೇ ಹೆ. ಸಿ. ನ್ಯಾ ಮತ್ತು ಜೆಎಂ ಎಫ್.ಸಿ.,
ಮಂಗಳೂರು.